ದಿನಾಂಕ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು: ಆರೋಪಿ ಪರ ವಕೀಲರಿಂದ:-**

1. ಎದುರುದಾರನ ತಂದೆ-ತಾಯಿ ಮೃತಪಟ್ಟಿರುತ್ತಾರೆ. ತಾಯಿ ಮೃತರಾಗಿ 1 ವರ್ಷಗಳಾಗಿವೆ. ತಂದೆ ಮೃತಪಟ್ಟು 6-7 ವರ್ಷಗಳಾಗಿವೆ.

2. ಮದುವೆಯಾದ ನಂತರ ನಾವಿಬ್ಬರು ಸಿಂಧನೂರಿನ ಜನತಾ ಕಾಲೋನಿಯಲ್ಲಿ ವಾಸವಿದ್ದೆವು. ಎದುರುದಾರನಿಗೆ ಅಣ್ಣತಮ್ಮಂದಿರು ಇರುತ್ತಾರೆ. ಅವರೆಲ್ಲರೂ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ಅವರು ಬೇರೆಯಾಗಿ 10 ರಿಂದ 12 ವರ್ಷಗಳು ಕಳೆದಿವೆ.

3. ನೀವು ತವರು ಮನೆಯಲ್ಲಿರಲು ಪ್ರಾರಂಭಿಸಿ ಎಷ್ಟು ವರ್ಷಗಳಾಗಿವೆ ಎಂದರೆ ಸಾಕ್ಷಿಯು ನಾನು ತವರು ಮನೆಯಲ್ಲಿಲ್ಲ, ನಾನು ನನ್ನ ಸ್ವಂತ ಮನೆಯಲ್ಲಿದ್ದೇನೆ ಎನ್ನುತ್ತಾರೆ. ನನ್ನ ಸ್ವಂತ ಮನೆಯಲ್ಲಿರಲು ಪ್ರಾರಂಭಿಸಿ 13 ವರ್ಷಗಳಾಗಿವೆ. ಸದರಿ ಮನೆ ನನ್ನ ಹೆಸರಿನಲ್ಲಿದೆ. ಸದರಿ ವಿಷಯವನ್ನು ನಾನು ನನ್ನ ಅನುಸೂಚಿ-1 ರಲ್ಲಿ ತೋರಿಸಿದ್ದೇನೆ. ಸದರಿ ಮನೆಯನ್ನು ನಿಮ್ಮ ಗಂಡ ಕೊಡಿಸಿರುತ್ತಾರೆಯೇ ಎಂದರೆ ಸಾಕ್ಷಿಯು ಸರ್ಕಾರದವರು ಕೊಟ್ಟಿರುತ್ತಾರೆ ಎನ್ನುತ್ತಾರೆ.

4. ಎದುರುದಾರನಿಗೆ ಸ್ವಂತ ಮನೆ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗ ಒಂದು ಪ್ಲಾಟನ್ನು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಸದರಿ ಪ್ಲಾಟನ್ನು ನನ್ನ ತಂದೆ & ಎದುರುದಾರ ಖರೀದಿ ಮಾಡಿರುತ್ತಾರೆ. ಸದರಿ ವಿಚಾರವನ್ನು ಸಾಬೀತುಪಡಿಸಲು ನಾನು ಯಾವುದೇ ಖಾಗದ ಪತ್ರಗಳನ್ನು ಕೊಟ್ಟಿಲ್ಲ. ಸಾಕ್ಷಿಯು ಮುಂದುವರೆದು ಅದು ಎದುರುದಾರನ ಹತ್ತಿರ ಇದೆ ಎನ್ನುತ್ತಾರೆ. ಸದರಿ ಜಾಗವನ್ನು ನಾನು ನೋಡಿರುತ್ತೇನೆ.

5. ಎದುರುದಾರನು ತನ್ನ ಕಟಿಂಗ್ ಶಾಪಿನಲ್ಲಿಯೇ ಜೀವಿಸುತ್ತಿದ್ದಾರೆ ಎಂದರೆ ಸರಿ.

6. ನೀವು ಎದುರುದಾರನ ವಿರುದ್ಧ ವಿಚ್ಛೇದನ ಕೋರಿ ಹಿರಿಯ ಶ್ರೇಣಿ ನ್ಯಾಯಾಲಯ, ಸಿಂಧನೂರಿನಲ್ಲಿ ಅರ್ಜಿ ಸಲ್ಲಿಸಿದ್ದಿರಿ ಎಂದರೆ ಸರಿ. ಅರ್ಜಿ ಹಾಕಿದ ನಂತರ ಜೀವನಾಂಶ ಕೋರಿ ಯಾವುದೇ ಪಂಚಾಯಿತಿ ಮಾಡಿಲ್ಲ.

7. ಎದುರುದಾರನಿಗೆ 2 ತೊಲೆ ಬಂಗಾರ ಕೊಟ್ಟಿದ್ದೆವು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ಸದರಿ ಬಂಗಾರವನ್ನು ಬಂಗಾರದ ಅಂಗಡಿಯಲ್ಲಿ ಖರೀದಿಸಿದ್ದೆವು. ಬಂಗಾರವನ್ನು ಖರೀದಿಸಿದರೆ ಬಿಲ್ಲನ್ನು ಕೊಡುತ್ತಾರೆ ಎಂದರೆ ಸರಿ. ಸದರಿ ಬಂಗಾರವನ್ನು ನನ್ನ ತಂದೆ ಖರೀದಿ ಮಾಡಿದ್ದರು. ರೂ.50,000/- ನಗದು ಹಣವನ್ನು ಬ್ಯಾಂಕಿನಿಂದ ತಂದಿದ್ದಿರಾ ಎಂದರೆ ಸಾಕ್ಷಿಯು ನನ್ನ

ತಂದೆಗೆ ಗೊತ್ತು ಎನ್ನುತ್ತಾರೆ. ಮನೆಬಳಕೆ ಸಾಮಾನುಗಳನ್ನು ಖರೀದಿಸಿದರೆ ಬಿಲ್ ಕೊಡುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಗೊತ್ತು ಎನ್ನುತ್ತಾರೆ.

8. ನನ್ನ ಮನೆಯ ಅಳತೆ 20 X 30. ನಾವಿಬ್ಬರು ಕೂಡಿ ಇದ್ದಾಗ ಖಾಲಿ ಜಾಗ ಬಂದಿತ್ತು. ನಂತರ ರೂ.7,00,000/- ಖರ್ಚು ಮಾಡಿ ಎದುರುದಾರ ಬೇಸ್ ಮೆಂಟ್ ಹಾಕಿಸಿದ್ದ ಎಂದರೆ ಸರಿ. ನಾನು ಬೇರೆ ಕಡೆಗೆ ಶೆಡ್ ಹಾಕಿಕೊಂಡು ಇದ್ದೇನೆ, ಬೇಸ್ಮೆಂಟ್ ಹಾಕಿದ ಜಾಗದಲ್ಲಿ ಮನೆ ಕಟ್ಟಿಕೊಂಡಿಲ್ಲ ಎನ್ನುತ್ತಾರೆ. ಸದರಿ ಸಾಲವನ್ನು ಎದುರುದಾರನೇ ತೀರಿಸುತ್ತಿದ್ದಾನೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

9. ಕಟಿಂಗ್ ಶಾಪಿಗೆ ಗಿರಾಕಿಗಳು ಬಂದರೆ ಮಾತ್ರ ಎದುರುದಾರನಿಗೆ ಆದಾಯ ಬರುತ್ತದೆ, ಇಲ್ಲವಾದರೆ ಇಲ್ಲ ಎಂದರೆ ಸಾಕ್ಷಿಯು ಗಿರಾಕಿಗಳು ಬರುತ್ತಾರೆ ಎನ್ನುತ್ತಾರೆ. ಶ್ರಾವಣ ಮಾಸ ಬಂದಾಗ ಯಾವುದೇ ಗಿರಾಕಿಗಳು ಬರುವುದಿಲ್ಲ ಎಂದರೆ ಸರಿ. ರಂಜಾನ್ ಬಂದಾಗ ಆ ಕಮ್ಯುನಿಟಿಯವರು ಕಟಿಂಗ್ ಶಾಪ್‌ಗೆ ಬರುವುದಿಲ್ಲ ಎಂದರೆ ಸಾಕ್ಷಿಯು ಇರಬಹುದು, ಆದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

10. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ ಬೆಳಿಗ್ಗೆ ಮಧ್ಯಾಹ್ನ & ರಾತ್ರಿಯ ಆಹಾರದ ಖರ್ಚು ರೂ.600/- ಬರುತ್ತದೆ ಎಂದರೆ ಸರಿ. ಎದುರುದಾರ ತನ್ನ ಬ್ಯಾಂಕಿನ ಲೋನ್ ಕಟ್ಟಿಕೊಂಡು, ತನ್ನ ಆಹಾರದ ಖರ್ಚನ್ನು ಮಾಡುತ್ತಿದ್ದಾನೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ.

11. ವಿಚ್ಛೇದನ ಅರ್ಜಿಯಲ್ಲಿ ನಾನು ನನ್ನ ವಕೀಲರನ್ನು ನೇಮಿಸಿಕೊಂಡಿದ್ದೆ. ನಾನು ನನ್ನ ವಕೀಲರ ಮುಖಾಂತರ ಹಾಜರಾಗಿ ವಿಚ್ಛೇದನ ಪಡೆದಿದ್ದೆ.

12. ಜಾಗದ ಸ್ವಾಧೀನವನ್ನು ಎದುರುದಾರ ನಿಮಗೆ ಬಿಟ್ಟಿರುತ್ತಾನೆ ಎಂದರೆ ಸರಿ. ಹಿರಿಯರ ಸಮಕ್ಷಮ ಎದುರುದಾರನು ಸದರಿ ಮನೆಯ ಸಂಪೂರ್ಣ ಅಧಿಕಾರವನ್ನು ನಿಮಗೆ ಬಿಟ್ಟುಕೊಟ್ಟಿದ್ದು, ಅದಕ್ಕೆ ನೀವು ಒಪ್ಪಿಕೊಂಡು, ಅದರಂತೆ ನೀವು ವಿಚ್ಛೇದನ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಎದುರುದಾರನ ಕಡೆಯವರು ಬಂದು ಒತ್ತಾಯ ಮಾಡಿ ನನ್ನ ಸಹಿ ಪಡೆದಿದ್ದರು ಎನ್ನುತ್ತಾರೆ.

13. ಸಾಕ್ಷಿಗೆ ದಾಖಲೆಯನ್ನು ತೋರಿಸಲಾಗಿ ಇದರಲ್ಲಿರುವ ಸಹಿ ನಿಮ್ಮದೆ ಎಂದರೆ ಸಾಕ್ಷಿಯು ಹೌದು ನನ್ನದೆ ಎಂದು ಒಪ್ಪಿಕೊಂಡಿದ್ದರಿಂದ, ಸದರಿ ದಾಖಲೆಯನ್ನು ನಿ. ಆರ್-1 ಎಂದು, ಸಾಕ್ಷಿಯ ಸಹಿಗಳನ್ನು ನಿಆರ್-1 ಎ & ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಭೀಮಾಶಂಕರ & ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದರೆ ಸರಿ.

14. ನೀವು ಹೇಳಿದಷ್ಟು ಎದುರುದಾರನಿಗೆ ಆದಾಯ ಇಲ್ಲ, ಸಾಲವನ್ನು ತೀರಿಸುತ್ತಾ ಜೀವನ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಸದರಿ ವಿಷಯ ನಿಮಗೆ ಗೊತ್ತಿದ್ದರೂ ಸಹ ಆತನಿಗೆ

ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸು ಹಾಕಿ, ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿಂಧನೂರು.**